**ದಿನಾಂಕ : *19-12-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಅರ್ಜಿದಾರರ ಪರವಾಗಿ ಶ್ರೀ ಆರ್ ಬಿ ಬಿ ವಕೀಲರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮತ್ತು ತಕರಾರಿಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನಾನು ದೂರು, ಪ್ರ.ವ. ವರದಿ ಮತ್ತು ಅಂತಿಮ ವರದಿಯನ್ನು ನೋಡಿರುತ್ತೇನೆ. ನಮ್ಮ ವಿಮೆಗೆ ಒಳಪಟ್ಟಂತಹ ವಾಹನದ ನಂ. ಕೆಎ-51 ಡಿ5155 ಇರುತ್ತದೆ. 1 ನೇ ಎದುರುದಾರರು ಅವರ ವಾಹನಕ್ಕೆ ಸಂಬಂದಪಟ್ಟಂತೆ ಅಪಘಾತವಾದ ನಂತರ ಮಾಹಿತಿ ನೀಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನಮ್ಮ ಕಂಪನಿಯ ವಿಮೆಗೆ ಒಳಪಟ್ಟ ವಾಹನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಅಂತಿಮ ವರದಿಯಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿದಾರರು ಕೇವಲ ನಮ್ಮ ವಿಮೆಗೆ ಒಳಪಟ್ಟ ವಾಹನದ ಚಾಲಕನಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸುಳ್ಳು ಎಂದು ಹೇಳುತ್ತಾರೆ. 1 ನೇ ಅರ್ಜಿದಾರರ ಮಗನಿಂದಲೇ ಸದರಿ ಅಪಘಾತವು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಅರ್ಜಿದಾರರ ಮಗನು ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯು ತಿಂಗಳಿಗೆ 40 ಸಾವಿರ ರೂ.ಗಳನ್ನು ದುಡಿಯುತ್ತಿದ್ದ ಮತ್ತು ಅವನಿಗೆ ಆಗ 30 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಮೃತ ವ್ಯಕ್ತಿಗೆ ಡಿಎಲ್ ಇತ್ತು ಮತ್ತು ಮೃತ ವ್ಯಕ್ತಿಯ ವಾಹನಕ್ಕೆ ಪರಿಮಿಟ್ ಇತ್ತು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರದ ಹಣವನ್ನು ಕೊಡಲು 2 ಮತ್ತು 4 ನೇ ಎದುರುದಾರರು ಸಂಯುಕ್ತವಾಗಿ ಹೊಣೆಗಾರರು ಎಂದರೆ ಸಾಕ್ಷಿದಾರರು ನಾವು ಹೊಣೆಗಾರರಲ್ಲ ಎಂದು ಹೇಳುತ್ತಾರೆ. ನಾವು ಪ್ರ.ವ. ವರದಿಯನ್ನು ಮತ್ತು ಅಂತಿಮ ವರದಿಯನ್ನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ನಾವು 3 ನೇ ವ್ಯಕ್ತಿ ಆಗಿರುವುದರಿಂದ ಪ್ರಶೆ ಮಾಡುವ ಪ್ರಶ್ನೆ ಬರುವುದಿಲ್ಲ ಎಂದು ಹೇಳುತ್ತಾರೆ.ಅಪಘಾತ ಪಡಿಸಿದ ವಾಹನವು ನಮ್ಮ ಕಂಪನಿಯ ವಿಮೆಗೆ ಒಳಪಟ್ಟಿರುವುದರಿಂದ ಪರಿಹಾರದ ಹಣವನ್ನು ಕೊಡಲು ತಪ್ಪಿಸಿಕೊಳ್ಳುವುದಕ್ಕೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1 ಮತ್ತು 3 ನೇ ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು. ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.